## ಪದಬಂಧ



ಎಡದಿಂದ ಬಲಕ್ಕೆ

1. ಅಸಮ್ಮತಿ ತೋರುವ ಬದಲು ಸುಮ್ಮನೆ ಕಣ್ಮರೆಯಾಗು 4
3. ಭ್ರಮನಿರಸನವಾದಂತೆ ಆಕಾಶ ಮೋಡರಹಿತ 3
4. ಮಧುರವಷ್ಟೇ ಅಲ್ಲ, ಆಕೆಯ ಮಾತಿನಲ್ಲಿ ತುಂಬ ಮೃದುತ್ವ ಕೂಡ 3
6. ನರಕ ತೋರಿಸುತ್ತೇನೆಂದವನಿಗೆ ಸಾಗರದಾಚೆಗೆ ಕಳುಹಿಸುವ ಶಿಕ್ಷೆ 4
7. ನ್ಯಾಯ ದೇವತೆಯ ಕಣ್ಣು ಹೇಗಿದೆ ನೋಡಿದಿರಾ? 3
9. ಅಭ್ಯಾಸ ಚೆನ್ನಾಗಿ ಮಾಡಿದ್ದರೆ ಮಾತ್ರ ಹೆದರಿಕೆ ದೂರ 3
11. ಕಾರ್ಯಕ್ರಮಕ್ಕೆ ಬರುವವರ ಜೊತೆಗೆ ಏನು ಒಪ್ಪಂದ? 3
13. ತಪ್ಪೆಸಗಿ ಬಂದವನು ಈಗ ಖುಷಿಯಾಗಿದ್ದಾನೆ 3
15. ಮೃದ್ವಂಗಿ ಚಿಪ್ಪನ್ನು ಊದಿ ಮಂಗಳಕರ ಶಬ್ದ 4
17. ವಾಣಿಜ್ಯ ಕ್ಷೇತ್ರದಲ್ಲಿ ಆತನೊಬ್ಬ ಪ್ರಸಿದ್ಧ ವ್ಯಾಪಾರಿ 3
18. ಎಂಥ ಮಹನೀಯರನ್ನೂ ಆಕರ್ಷಿಸುತ್ತಾನೆ ವಾಯುಪುತ್ರ 3
19. ದೊರೆತದ್ದನ್ನೆಲ್ಲ ತ್ಯಜಿಸಿ ಅಮೂಲ್ಯ ಮಣಿಯನ್ನೂ ಸುಮ್ಮನೆ ನೀಡಿದನೇ? 4

ಮೇಲಿನಿಂದ ಕೆಳಕ್ಕೆ

1. ಹೊಳಪಿನ ಖನಿಜವಾದರೂ ಆಭರಣಕ್ಕೆ ಸೂಕ್ತವಲ್ಲ 3
2. ಸಮರದಂತೆಯೇ ನಡೆಯಿತು, ಸ್ವಲ್ಪ ಹೆಚ್ಚು ಕಡಿಮೆ ಅಷ್ಟೇ 3
3. ನೇರಳೆಯ ವೃಕ್ಷದ ಬಳಿ ಒಂದು ವಾಸದ ಮನೆ 3
5. ಬಾಳುವ ತಂತ್ರಗಳನ್ನು ಚೆನ್ನಾಗಿ ಬಲ್ಲವನೇ ಆಕೆಯ ಪತಿ 3
7. ಎಲ್ಲರನ್ನೂ ಕಾಡುವವನನ್ನು ಕಂಡರೇ ಹೆದರಿಕೆ, ಕಂಪನ 3
8. ನವಿಲಿನ ರೂಪವನ್ನು ಕಂಡು ಪುಳಕ, ರೋಮಾಂಚನ 3
9. ಆ ಕ್ಷೇತ್ರ ತುಂಬ ಸುರಕ್ಷಿತ; ಅದಕ್ಕೇ ಅದು ಕಿಂಚಿತ್ತೂ ಭಗ್ನವಾಗಿಲ್ಲ 3
10. ವಿಷವನ್ನೆಲ್ಲ ದೂರ ಎಸೆಯುವಲ್ಲಿ ಆತ ಜಯಶಾಲಿಯಾದ 3
12. ವಜೀರನಾಗಿದ್ದವನ ಕೈಯಲ್ಲಿ ಸದಾ ಒಂದು ತಾವರೆ 3
14. ಪಕ್ಷಿಗಳ ಮಧ್ಯೆಯೇ ತೇಲಿಹೋಗಿ ತಲುಪಿದ್ದು ಸೂರ್ಯಾಸ್ತದ ದಿಕ್ಕು 3
15. ಶಿವ, ಹರ, ಈಶ್ವರ,... ಹಾಗೆಯೇ ಮತ್ತೊಂದು ಹೆಸರು 3
16. ಹೊದಿಕೆಯನ್ನು ತೆಗೆದು ಸುಟ್ಟು ಹಾಕುವುದೇ? 3

### 06–10–2022 ಉತ್ತರಗಳು

ಎಡದಿಂದ ಬಲಕ್ಕೆ

1. ಮೋದಕ 3. ಕಲಹ 4. ವಲ್ಲಭ 6. ಅನುರಕ್ತ 7. ನಸುನಗು 9. ರಕ್ತಪಾತ 11. ಆವಿಷ್ಕಾರ 15. ಕಲ್ಮಶ 16. ಧಾವನ 17. ಯವನ

ಮೇಲಿನಿಂದ ಕೆಳಕ್ಕೆ

1. ಮೋಹನ 2. ಕವಡೆ 3. ಕರ್ತಾರ 5. ಭರಿಸು 6. ಅಬ್ಬರ 8. ಗುಡಾರ 10. ಪಾತಕ 12. ವಿಲೀನ 13. ಆಶಯ 14. ಸಂಧಾನ

ಪ್ರಶ್ನಾಂಕಣ

# ಇರುವೆ: ಎಷ್ಟು ಬಗೆ?

ಇರುವೆ: ಇದು ಕೀಟ ವರ್ಗಕ್ಕೆ ಸೇರಿದ ಒಂದು ಜೀವಿ. ಚಿಕ್ಕ ಗಾತ್ರಕ್ಕೆ ಸಮಾನಾರ್ಥಕವಾಗಿರುವ ಇರುವೆಗಳು ಬುವಿಯಲ್ಲಿ ಬಹು ಪಾಲು ಸರ್ವಂತರ್ಯಾಮಿಗಳಾಗಿವೆ ಕೂಡ. ಆರ್ಕ್ಟಿಕ್ ಪ್ರದೇಶ ಮತ್ತು ಅಂಟಾರ್ಕ್ಟಿಕಾ ಭೂ ಖಂಡ ಇವೆರಡು ಪ್ರದೇಶಗಳನ್ನು ಬಿಟ್ಟು ಉಳಿದೆಲ್ಲ ನೆಲ ಪ್ರದೇಶಗಳು ಇರುವೆಗಳ ವಾಸಕ್ಷೇತ್ರ. ಈಗ್ಗೆ ಸುಮಾರು ಒಂದು ನೂರು ವರ್ಷಗಳ ಹಿಂದೆ ಅವತರಿಸಿ, ಹೇರಳ ಪ್ರಭೇದ ಉಪಪ್ರಭೇದಗಳಾಗಿ ವಿಕಸಿಸಿ ಪ್ರಸ್ತುತ ಅಸಂಖ್ಯ ಎನಿಸುವಷ್ಟು 'ಜನಸಂಖ್ಯೆ'ಯನ್ನು ತಲುಪಿರುವ ಇರುವೆಗಳು ಅತ್ಯುತ್ತಮ ಹೊಂದಾಣಿಕೆಯ ಸಹಜೀವನಕ್ಕೆ ಪರಮ ಪ್ರಸಿದ್ಧ ಕೂಡ.

ಇನ್ನೂ ವಿಶೇಷ ಏನೆಂದರೆ, ಭೂ ಜೀವ ಜಾಲದ ಸ್ವಾಸ್ಥ್ಯದಲ್ಲೂ, ಸುವ್ಯವಸ್ಥೆಯಲ್ಲೂ ಇರುವೆಗಳದು ಭಾರೀ ಮಹತ್ವದ ಬಹು ವಿಧ ಪಾತ್ರ. ಇರುವೆಗಳು ಮಣ್ಣನ್ನು ಫಲವತ್ತಾಗಿಸುತ್ತಿವೆ; ಹೂವುಗಳ ಪರಾಗ ಸ್ಪರ್ಶ ಮಾಡುತ್ತಿವೆ; ಬೀಜ ಪ್ರಸಾರ ಮಾಡುತ್ತಿವೆ; ಸಾವಯವ ವಸ್ತುಗಳನ್ನು ಕೊಳೆಸಿ ಗೊಬ್ಬರವನ್ನಾಗಿಸುತ್ತಿವೆ; ಪಿಡುಗುಕಾರಕಗಳಿಂದ ಸಸ್ಯಗಳನ್ನು ರಕ್ಷಿಸುತ್ತಿವೆ; ಆಹಾರ ಸರಪಳಿಗಳಲ್ಲಿ ಬೇಟೆಗಾರರಾಗಿ ಅಥವಾ ಬಲಿ ಪ್ರಾಣಿಗಳಾಗಿ ಜೀವಲೋಕದ ಸ್ವಾಸ್ಥ್ಯವನ್ನು ಕಾಪಾಡುತ್ತಿವೆ.

ಇಂಥ ಅತ್ಯದ್ಭುತ, ಅತ್ಯಗತ್ಯ, ಅತ್ಯುಪಯುಕ್ತ ಜೀವಿಗಳಾದ ಇರುವೆಗಳನ್ನು ಕುರಿತು ಈಗ್ಗೆ ಕೆಲವು ವರ್ಷಗಳಿಂದ ಜಾಗತಿಕ ಮಟ್ಟದಲ್ಲಿ ನಡೆದು ಬಂದ ವಿಸ್ತೃತ ವೈಜ್ಞಾನಿಕ ಅಧ್ಯಯನ ಮತ್ತು ಸಂಶೋಧನೆಗಳ ಸಮಗ್ರ ಫಲಿತಾಂಶಗಳು ಇತ್ತೀಚೆಗೆ ಒಂದೆರಡು ವಾರಗಳಷ್ಟೇ ಹಿಂದೆ 'ನೇಚರ್' ಎಂಬ ಪ್ರತಿಷ್ಠಿತ ವಿಜ್ಞಾನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಜಗತ್ತಿನಲ್ಲಿರುವ ಇರುವೆಗಳ ಒಟ್ಟು ಪ್ರಭೇದಗಳ ಸಂಖ್ಯೆ ಮತ್ತು ಒಟ್ಟು ಜನಸಂಖ್ಯೆ ಕುರಿತ ಆ ಶೋಧಗಳ ಬಹು ಕುತೂಹಲದ ಮಾಹಿತಿಗಳು ಇಲ್ಲಿವೆ:

- ಧರೆಯಲ್ಲಿ ಈವರೆಗೆ ಪತ್ತೆಯಾಗಿರುವ ಇರುವೆ ಪ್ರಭೇದಗಳ ಒಟ್ಟು ಸಂಖ್ಯೆ 15,700! ವಾಸ್ತವದ ಈ ಸಂಖ್ಯೆ ಇನ್ನೂ ಬಹಳ ಹೆಚ್ಚಾಗಿರುವ ಖಚಿತ ಸಾಧ್ಯತೆ ಇದೆ (ಇರುವೆಗಳ ನಾಲ್ಕು ಪ್ರಭೇದಗಳನ್ನು ಚಿತ್ರಗಳಲ್ಲಿ ಗಮನಿಸಿ).




- ಪೃಥ್ವಿಯಲ್ಲಿರುವ ಎಲ್ಲ ವಿಧಗಳ ಇರುವೆಗಳ ಒಟ್ಟು ಜನಸಂಖ್ಯೆ ಇಪ್ಪತ್ತು ಕ್ವಾಡ್ರಿಲಿಯನ್. ಎಂದರೆ, ಎರಡು ನೂರು ಕೋಟಿ ಕೋಟಿ (2 ರ ಮುಂದೆ 16 ಸೊನ್ನೆಗಳನ್ನು ಬರೆದರೆ ಆ ಸಂಖ್ಯೆ ಬರುತ್ತದೆ!) ಹಾಗೆಂದರೆ, ಪ್ರಸ್ತುತ ಬದುಕಿರುವ ಪ್ರತಿಯೊಂದು ಮನುಷ್ಯನಿಗೂ 25 ಲಕ್ಷ ಆಗುವಷ್ಟು ಇರುವೆಗಳಿವೆ! ಈ ಎಲ್ಲ ಇರುವೆಗಳ ಶರೀರದಲ್ಲಿರುವ 'ಒಣ ಇಂಗಾಲ'ದ ಒಟ್ಟು ತೂಕ ಹನ್ನೆರಡು ದಶಲಕ್ಷ ಟನ್; ಇದು ಧರೆಯಲ್ಲಿರುವ ಎಲ್ಲ ಹಕ್ಕಿಗಳ ಮತ್ತು ಮಾನವೇತರ ಸ್ತನಿವರ್ಗದ ಪ್ರಾಣಿಗಳ ಇಂಗಾಲದ ಮೊತ್ತಕ್ಕಿಂತ ಅಧಿಕ!

■ ಎನ್‌. ವಾಸುದೇವ್